ರಾಜ್ಯ ಸರ್ಕಾರದ ನಿವೃತ್ತ ನೌಕರರ ಬೇಡಿಕೆಗಳ ಬಗ್ಗೆ

75 (287) ಶ್ರೀ ಶಂಕರಲಿಂಗೇಗೌಡ, ಹೆಚ್ ಎಸ್ (ಚಾಮರಾಜ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಾದ್ಯಂತ ಇರುವ ನಿವೃತ್ತಿ ನೌಕರರ ಸಂಖ್ಯೆ ಎಷ್ಟು

ಆ) ಈ ನೌಕರರ ಸಂಘಟನೆಯವರು ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳೇನು,

ಇ) ಸದರಿ ಬೇಡಿಕೆಗಳ ಪೈಕಿ ಯಾವ ಯಾವ ಬೇಡಿಕೆಗಳನ್ನು ಈಡೇರಿಸಲಾಗಿದೆ ಹಾಗೂ ಈಡೇರಿಸಬೇಕಾಗಿದೆ

ಈ) ಈಡೇರಿಸಲೇ ಬೇಕಾದ ಬೇಡಿಕೆಗಳಿಗೆ ಸರ್ಕಾರ ನಿಲುವೇನು?

ಶ್ರೀ ಎಸ್ ಎಂ ಕೃಷ್ಣ (ಮುಖ್ಯಮಂತ್ರಿಯವರು)

ಅ) 3 13 ಲಕ್ಷಗಳು

ಆ) ಈ ಕೆಳಕಂಡ 9 ಬೇಡಿಕೆಗಳನ್ನು ಸಂಘವು ನೀಡಿರುತ್ತದೆ

(1) 5ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಕೇಂದ್ರ ಸರಕಾರದ ಮಾದರಿಯಲ್ಲಿ ರಾಜ್ಯದ ನಿವೃತ್ತಿಗೂ ಕನಿಷ್ಟ 1275 ರೂ ಗಳ ಪಿಂಚಣಿಯನ್ನು ನೀಡುವುದು

(2) ಕೇಂದ್ರ ಸರಕಾರದ ಮಾದರಿಯಂತೆ 1994 ಕ್ಕೂ ಹಿಂದಿನ ಅವಧಿಯಲ್ಲಿ ನಿವೃತ್ತರಾದವರಿಗೆ ನ್ಯಾಷನಲ್ ಫಿಟ್‌ಮೆಂಟ್ ಸೂತ್ರದನ್ವಯ ಪಿಂಚಣಿಯನ್ನು ನಿಗಧಿಪಡಿಸುವುದು

(3) 4ನೇ ವೇತನ ಆಯೋಗದ ಶಿಫಾರಸ್ಸಿನಂತೆ ಶೇಕಡಾ 7 5 ರಷ್ಟು ಪಿಂಚಣಿಯನ್ನು ಹೆಚ್ಚಿಸುವುದು

(4) ರಿಯಾಯಿತಿ ದರದಲ್ಲಿ ಹಿರಿಯ ನಾಗರೀಕರಿಗೆ, ಬಸ್ ಪಾಸ್ ನೀಡುವುದು

(5) ತಮಿಳುನಾಡು ಸರಕಾರದ ಯೋಜನೆಯಂತೆ, ಕುಟುಂಬ ಕಲ್ಯಾಣ ನಿಧಿಯ ರಚನೆ

(6) ಆಂಧ್ರ ಪ್ರದೇಶದಲ್ಲಿ ಜಾರಿಯಲ್ಲಿರುವಂತೆ, ನಿವೃತ್ತ ನೌಕರರ ಮರಣಾನಂತರ ಶವಸಂಸ್ಕಾರಕ್ಕೆ 2000 00 ರೂ ಗಳ ಮಂಜೂರಾತಿ

(7) ರಾಜಸ್ಥಾನ ರಾಜ್ಯದಲ್ಲಿ ಜಾರಿಯಲ್ಲಿರುವಂತೆ ವೈದ್ಯಕೀಯ ವೆಚ್ಚ ನಿಧಿಯನ್ನು ಸ್ಥಾಪಿಸುವುದು

(8) ಹೃದಯ, ಮೂತ್ರ ಪಿಂಡ ಮುಂತಾದ ಪ್ರಾಮುಖ್ಯ ಅಂಗಗಳ ದೋಷಗಳ ಚಿಕಿತ್ಸೆಗಾಗಿ ವೈದ್ಯಕೀಯ/ಶಸ್ತ್ರ ಚಿಕಿತ್ಸೆಗಾಗಿ ಮಾಡಲಾದ ವೆಚ್ಚವನ್ನು ಮರುಪಾವತಿ ಮಾಡುವುದು

(9) 55ನೇ ವಯಸ್ಸಿಗೆ ವಯೋ ನಿವೃತ್ತರಾದವರಿಗೆ 3 ವಾರ್ಷಿಕ ಬಡ್ತಿಯನ್ನು ಮಂಜೂರು ಮಾಡುವುದು

ಇ) ಭಾರತ ಸರ್ಕಾರ 1966ರಲ್ಲಿ ರಚಿಸಿದ ಪಿಂಚಣಿದಾರರ ಕಲ್ಯಾಣ ಸ್ಥಯೀ ಸಮಿತಿ (ಸ್ಕೋವಾ) ಮಾದರಿಯಲ್ಲಿ ಕರ್ನಾಟಕ ಸರ್ಕಾರ ತನ್ನ ಆದೇಶ ಸಂಖ್ಯೆ ಆಇ(ವಿ) 3 ಸಂತಪ್ರ 1999 ದಿನಾಂಕ 28 4 03 ರ ಮೇರೆಗೆ ಪಿಂಚಣಿದಾರರ ಕಲ್ಯಾಣ ಸ್ಥಾಯಿ ಸಮಿತಿ (ಸ್ಕೋವಾ)ಯನ್ನು ರಚಿಸಿದೆ ಮಾನ್ಯ ಮುಖ್ಯ ಮಂತ್ರಿಗಳು ಸದರಿ ಸಮಿತಿಯ ಅಧ್ಯಕ್ಷರಾಗಿರುತ್ತಾರೆ ಆದರೆ ಮೇಲಿನ ಬೇಡಿಕೆಗಳನ್ನು

ಸ್ಥಾಯಿ ಸಮಿತಿಯ ಸಭೆಯನ್ನು ಜರುಗಿಸಿ ಚರ್ಚಿಸುವ ಮುನ್ನ ಕರ್ನಾಟಕ ರಾಜ್ಯ ನಿವೃತ್ತಿ ನೌಕರರ ಸಂಘವು ಸರ್ಕಾರದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆಯನ್ನು (ಅರ್ಜಿ ಸಂಖ್ಯೆ 2054 ಮತ್ತು 2055/2003) ಹೂಡಿದ್ದು, ದಿನಾಂಕ 20 9 03 ರಲ್ಲಿ ಸರ್ಕಾರದ ಪರವಾಗಿ ಕಂಡಿಕೆವಾರು ಉತ್ತರವನ್ನು ಸರ್ಕಾರದ ವಕೀಲರಿಗೆ ಕಳುಹಿಸಲಾಗಿದೆ ಆದ್ದರಿಂದ ಈ ಪ್ರಕರಣವು ನ್ಯಾಯಾಲಯದ ಮುಂದೆ ಇದ್ದು ನ್ಯಾಯಾಲಯದ ತೀರ್ಮಾನವನ್ನು ನಿರೀಕ್ಷಿಸಲಾಗಿದೆ

ಈ) ಮೇಲಿನ (ಇ)ಗೆ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಮೈಸೂರಿನಲ್ಲಿರುವ ವಿದ್ಯುಚ್ಛಕ್ತಿ ವೋಲ್ಟೇಜ್ ಸಮಸ್ಯೆಯ ಪರಿಹಾರ ಕುರಿತು

76 (290) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಯಾವ ಯಾವ ಬಡಾವಣೆಗಳಲ್ಲಿ ವಿದ್ಯುಚ್ಛಕ್ತಿ ವೋಲ್ಟೇಜ್ ಸಮಸ್ಯೆ ಇದೆ

ಆ) ಈ ಸಮಸ್ಯೆಯನ್ನು ಬಗೆಹರಿಸಲು ಯಾವ ರೀತಿಯ ಶಾಶ್ವತ ಪರಿಹಾರ ಕ್ರಮವನ್ನು ವಹಿಸಲಾಗಿದೆ

ಇ) ಸಮಸ್ಯೆ ನಿವಾರಣೆಗೆ ತಗಲಬಹುದಾದ ವೆಚ್ಚವೆಷ್ಟು

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಮೈಸೂರು ನಗರದ, ಶಾಂತಿನಗರ, ಗೌಸಿಯಾ ನಗರದ ಭಾಗಶಃ ಪ್ರದೇಶಗಳು ಹಾಗೂ ಮಂಡಿ ಮೊಹಲ್ಲಾ, ಟಿ ಕೆ ಲೇ ಔಟ್ ಮತ್ತು ಜೈನ್ ಆಸ್ಪತ್ರೆ ಪ್ರದೇಶಗಳಲ್ಲಿ ಬಡಾವಣೆಗಳಲ್ಲಿ ಕಡಿಮೆ ವೋಲ್ಟೇಜ್ ಸಮಸ್ಯೆ ಸ್ವಲ್ಪ ಮಟ್ಟಿಗೆ ಇತ್ತು ಈಗ ಈ ಬಡಾವಣೆಗಳಲ್ಲಿ ಹೆಚ್ಚು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿ ಮತ್ತು ಈ ಪ್ರದೇಶಗಳಲ್ಲಿದ್ದ ಸಿಂಗಲ್ ಫೇಸ್ ವಿದ್ಯುತ್ ಮಾರ್ಗಗಳನ್ನು ಮೂರು ಪೇಸ್ ವಿದ್ಯುತ್ ಮಾರ್ಗಗಳನ್ನಾಗಿ ಪರಿವರ್ತಿಸಿ, ಈ ಬಡಾವಣೆಗಳಲ್ಲಿದ್ದ ವಿದ್ಯುಚ್ಛಕ್ತಿ ವೋಲ್ಟೇಜ್ ಸಮಸ್ಯೆಗಳನ್ನು ಗಣನೀಯವಾಗಿ ನಿವಾರಿಸಲಾಗಿರುತ್ತದೆ

ಹಾಗೂ ಮೈಸೂರು ನಗರದ ಎನ್ ಆರ್ ಮೊಹಲ್ಲಾ, ಉದಯಗಿರಿ, ಬನ್ನಿಮಂಟಪ, ಶಿವರಾಂ ಪೇಟೆ ದೇವರಾಜ ಅರಸು ರಸ್ತೆ, ಮಂಡಿ ಮೊಹಲ್ಲಾ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ವೋಲ್ಟೇಜ್ ಗುಣಮಟ್ಟವನ್ನು ಇನ್ನಷ್ಟು ಉತ್ತಮಪಡಿಸಲು ಹೊಟಗಳಲ್ಲಿಯ 220 ಕೆ ವಿ ವಿದ್ಯುತ್ ವಿತರಣಾ ಕೇಂದ್ರದಿಂದ ಎಫ್ ಟಿ ಎಸ್ ವಿದ್ಯುತ್ ವಿತರಣಾ ಕೇಂದ್ರಕ್ಕೆ ಈ ಹಿಂದೆ ಇದ್ದ 66 ಕೆ ವಿ ಹಳೆಯ ಸಿಂಗಲ್ ಸರ್ಕ್ಯೂಟ್ ವಿದ್ಯುತ್ ಮಾರ್ಗವನ್ನು 66 ಕೆ ವಿ ಜೋಡಿ ಸರ್ಕ್ಯಟ್ ಮಾರ್ಗವನ್ನಾಗಿ ಪರಿವರ್ತಿಸಿ ಆಗಸ್ಟ್ – 2002 ರಲ್ಲಿ ಚಾಲನೆಗೊಳಿಸಲಾಗಿದೆ

ಈ ಕ್ರಮಗಳಿಂದಾಗಿ ಮೈಸೂರು ನಗರದ ಬಡಾವಣೆಗಳಲ್ಲಿ ವಿದ್ಯುಚ್ಛಕ್ತಿ ವೋಲ್ಟೇಜ್ ಸಮಸ್ಯೆ ಅಷ್ಟಾಗಿ ಇರುವುದಿಲ್ಲ

ಅಲ್ಲದೇ ಮೈಸೂರು ನಗರಕ್ಕೆ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮತ್ತು ಹೆಚ್ಚಿನ ವಿದ್ಯುತ್ ಸರಬರಾಜಿಗಾಗಿ ಮುಂಬರುವ ವರ್ಷಗಳಲ್ಲಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ

1 ಹಾಸನ 220 ಕೆ ವಿ ವಿದ್ಯುತ್ ಸಬ್ ಸ್ಟೇಷನ್ನಿನ ಲೋಡನ್ನು ಶಿವಮೊಗ್ಗ–ಮೈಸೂರು 220 ಕೆ ವಿ ವಿದ್ಯುತ್ ಪ್ರಸರಣಾ ಮಾರ್ಗದಿಂದ ತೆಗೆದು ಶಿವಮೊಗ್ಗ–ಬೆಂಗಳೂರು